ಸ್ವರ್ಗಕ್ಕೆ ಹೋದವರಿಗೆ ನಲವತ್ತೊಂಬತ್ತು ಕನ್ಯೆಯರು ಸಿಗುತ್ತಾರೆಂಬ ನಂಬಿಕೆಯನ್ನು ಅನೇಕರು ಹೇಳಿಕೊಳ್ಳುತ್ತಿರುತ್ತಾರೆ. ಒಂದು ವೇಳೆ ಅದು ನಿಜವೇ ಆದಲ್ಲಿ ಅಲ್ಲೀಗ ಒಬ್ಬರೇ ಗಿರೀಶರು ಅಷ್ಟೆಲ್ಲ ಕನ್ಯೆಯರಿಗೆ ಸಾಕಾಗುವುದಿಲ್ಲ. ಪ್ರತಿ ಕನ್ಯೆಯೂ ಗಿರೀಶರೇ ಬೇಕು ಎಂದು ಬಯಸಬಹುದು.

ಮಾಡಿಕೊಳ್ಳುತ್ತೇನೆ ಎಂದೋ, ತುಂಬಾ ಪ್ರೀತಿಸುತ್ತಿದ್ದೆ ಎಂದೋ ಹೇಳಲಾರೆ. ಅವರು ಅಂಥ ಭಾವಗಳೆಲ್ಲಕ್ಕಿಂತ ದೊಡ್ಡವರು.

ಗಿರೀಶರನ್ನು ಕಂಡರೆ ನನಗೆ ಒಂಥರಾ ಹೊಟ್ಟೆಕಿಚ್ಚು. ವಿಶೇಷವಾಗಿ ಹುಡುಗಿಯರನ್ನು ಅವರು ಆಕರ್ಷಿಸುತ್ತಿದ್ದ ಪರಿ. ತಮ್ಮ ಬೌದ್ಧಿಕ ಚಿಂತನೆಗಳ ಬೀಸಿನಿಂದ ಆವರಿಸುತ್ತಿದ್ದ ರೀತಿ. ಅವರಿಂದ ನಾನು ಅಭಿನಯದ ವರಸೆಗಳನ್ನು ಕಲಿತೆ ಎಂದು ಕೂಡ ಹೇಳಲಾರೆ. ನಾನು ಅವರ ಜೊತೆ ಒಂದೇ ಸಿನಿಮಾದಲ್ಲಿ ನಟಿಸಿದ್ದು.

ನಾನು ಮೆಚ್ಚಿದ ಅವರ ಮೂರು ಗುಣಗಳನ್ನು ನಾನು ಹೇಳಬೇಕು: ಕರುಣೆ, ಹೃದಯವೈಶಾಲ್ಯ ಹಾಗೂ ಧೈರ್ಯ. 'ಎಫ್‌ಟಿಐಐ' ನಿರ್ದೇಶಕರಾಗಿದ್ದಾಗ ಅವರು ತಮ್ಮ ಪೋಷಕರನ್ನು ಕಕ್ಕುಲತೆಯಿಂದ ಆರೈಕೆ ಮಾಡಿದ್ದನ್ನು ನಾನು ಬಲ್ಲೆ. ನನ್ನಂಥ, ಓಂನಂಥ (ಓಂಪುರಿ) ವಿದ್ಯಾರ್ಥಿಗಳ ಬಗೆಗೆ ಅವರಿಗಿದ್ದ ಕಾಳಜಿಯನ್ನೂ ಸ್ಮರಿಸಬೇಕು. ನಾವು ಅವರಿಗೆ ಯಾರೂ ಆಗಿರಲಿಲ್ಲ. ನಮ್ಮಲ್ಲಿ ಸತತವಾಗಿ ನೈತಿಕ ಸ್ಥೈರ್ಯ ತುಂಬಿ, ವೃತ್ತಿಬದುಕನ್ನು ಪ್ರಾರಂಭಿಸಲು ಅಗತ್ಯವಿದ್ದ ಹಣಸಹಾಯದ ದಾರಿಯನ್ನೂ ತೋರಿದವರು ಅವರು. ನನಗಾಗಲೀ, ಓಂಗಾಗಲೀ ಅವರ ಋಣಸಂದಾಯ ಮಾಡುವ ಅವಕಾಶವೇ ಸಿಗಲಿಲ್ಲ.

ಕೊನೆಗಾಲದಲ್ಲಿ ನಾನು ಅವರ ಧೈರ್ಯವನ್ನು ಕಂಡು ನಿಬ್ಬೆರಗಾಗಿದ್ದೇನೆ. ಅವರು ತಾವು ನಂಬಿದ್ದನ್ನು, ಪ್ರತಿಪಾದಿಸಲೇಬೇಕಿದ್ದನ್ನು ನಿರ್ದಾಕ್ಷಿಣ್ಯವಾಗಿ, ನಿರ್ಭೀತಿಯಿಂದ ಹೇಳುತ್ತಾ ಬಂದರು. ಆರೋಗ್ಯ ಹೇಳಿದಂತೆ ಕೇಳದೇ ಇದ್ದಾಗಲೂ ಆ ನಿರ್ಭಿಡೆಯ ಧೋರಣೆ ಮುಕ್ಕಾಗಲಿಲ್ಲ. ಕಂತುವ ಬೆಳಕನ್ನು ಕಾಣುತ್ತ ಕತ್ತಲಲ್ಲಿ ನಿಲ್ಲುವುದು ತಮಾಷೆಯಲ್ಲ. ಹತ್ತು ಜನರು ಏನೆಲ್ಲ ಮಾಡಬಹುದೋ ಅದನ್ನು ಗಿರೀಶರು ಒಬ್ಬರೇ ಮಾಡಿದ್ದರು.

ಸ್ವರ್ಗಕ್ಕೆ ಹೋದವರಿಗೆ ನಲವತ್ತೊಂಬತ್ತು ಕನ್ಯೆಯರು ಸಿಗುತ್ತಾರೆಂಬ ನಂಬಿಕೆಯನ್ನು ಅನೇಕರು ಹೇಳಿಕೊಳ್ಳುತ್ತಿರುತ್ತಾರೆ. ಒಂದು ವೇಳೆ ಅದು ನಿಜವೇ ಆದಲ್ಲಿ ಅಲ್ಲೀಗ ಒಬ್ಬರೇ ಗಿರೀಶರು ಅಷ್ಟೆಲ್ಲ ಕನ್ಯೆಯರಿಗೆ ಸಾಕಾಗುವುದಿಲ್ಲ. ಪ್ರತಿ ಕನ್ಯೆಯೂ ಗಿರೀಶರೇ ಬೇಕು ಎಂದು ಬಯಸಬಹುದು. ನಲವತ್ತೊಂಬತ್ತು ಗಿರೀಶರನ್ನು ಭಗವಂತ ತಾನೆ ಹೇಗೆ ಸೃಷ್ಟಿಸಿಯಾನು? ಇದ್ದದ್ದು ಒಬ್ಬರೇ, ನಿಜವಾದ ಗಿರೀಶ ಕಾರ್ನಾಡರಲ್ಲವೇ?

ನಾಸಿರುದ್ದೀನ್ ಶಾ ಮತ್ತು ಶ್ಯಾಮ್ ಬೆನೆಗಲ್ ಅವರ ಬರಹಗಳು,
'ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್'ನ ಗಿರೀಶ ಕಾರ್ನಾಡ ಸಂಸ್ಮರಣೆ
ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡ ವಿಡಿಯೊಗಳ ಅಕ್ಷರರೂಪಗಳು.
ವಿಡಿಯೊದಿಂದ ಬರಹಕ್ಕೆ: ವಿಶಾಖ ಎನ್.